


## ಹೊಸ ವರ್ಷಕ್ಕೆ ಸೂಕ್ತ ಸ್ವಾಗತ

'ಸುಧಾ' ಜ.10ರ 'ಹೊಸ ವರ್ಷ ಹೊಸ ಹುಟ್ಟು' ಮುಖಪುಟ ಲೇಖನದಲ್ಲಿ ವಿವಿಧ ದೇಶಗಳಲ್ಲಿ ಹೊಸ ವರ್ಷವನ್ನು ಸ್ವಾಗತಿಸುವ ಕುರಿತು ರಾಘವೇಂದ್ರ ತೊಗರ್ಸಿ ಅವರು ಚೆನ್ನಾಗಿ ನಿರೂಪಿಸಿದ್ದಾರೆ.

-ಸು.ವಿಜಯಲಕ್ಷ್ಮಿ, ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ/ ರೇಣುಕಾ ಪಾಟೀಲ, ದಾವಣಗೆರೆ

## ಅದ್ಭುತ ಮಾಹಿತಿ

'ಅರಳುವ ಹೂವುಗಳು ಬಾಡುವುದೇಕೆ?' ಎಚ್.ಬಿ.ಧಾರಿಣಿ ಲೇಖನ ಅದ್ಭುತ ಮಾಹಿತಿ ನೀಡಿದೆ.

-ಚೈತ್ರಾ ಕುಕ್ಕೆಮನೆ, ಬೆಂಗಳೂರು

## ಮೂರ್ತಿಗೆ ಸೂಕ್ತ ನಮನ

ಇತ್ತೀಚೆಗೆ ನಿಧನರಾದ ರಂಗಕರ್ಮಿ ಎ.ಎಸ್.ಮೂರ್ತಿ ಅವರ ಇಡೀ ಕಲಾ ಬದುಕನ್ನು ಒಂದೇ ಪುಟದಲ್ಲಿ ಗುಡಿಹಳ್ಳಿ ನಾಗರಾಜ ಕಟ್ಟಿಕೊಟ್ಟಿದ್ದಾರೆ. ಇತರೆ ಪತ್ರಿಕೆಗಳು ಮೂರ್ತಿಯವರ ಸಾಧನೆಗಳನ್ನು ಗುರುತಿಸದೇ ಇರುವಾಗ 'ಸುಧಾ' ಮಾಡಿದ್ದು ಸ್ತುತ್ಯಾರ್ಹ ಕೆಲಸ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಪತ್ರೇಶಿ ಹಿರೇಮಠ, ಹಗರಿ ಬೊಮ್ಮನಹಳ್ಳಿ/ ಕಾಳೀಹುಂಡಿ ಶಿವಕುಮಾರ್, ಮೈಸೂರು

## ಅಪೂರ್ವ ಮಾಹಿತಿ

'ಉರು ವಿಶಿಷ್ಟ ಜಾನಪದ ದೈವ...' ಬಿ.ಎಂ. ಚಂದ್ರಶೇಖರಯ್ಯ ಲೇಖನ ಅಪೂರ್ವ ಮಾಹಿತಿ ನೀಡಿತು.

-ಮಹೇಶ ಈರಣ್ಣ, ಲಿಂಗಸೂಗೂರು

## ಕೌತುಕಮಯ ಕೌಲಾಲ!

ಕೆ.ಆರ್. ಉಮಾದೇವಿ ಉರಾಳ್ ಅವರ 'ಕೌಲಾಲಂಪುರದ ಕೌತುಕ' ಲೇಖನ ಕೌತುಕಮಯವಾಗಿತ್ತು.

-ಎಚ್.ಎಸ್. ಹೇಮಲತಾ, ಹುಂಚ/ ಎಸ್.ಚನ್ನಪ್ಪ, ಮೈಸೂರು

## ಕೌತುಕಗಳು ನಮ್ಮಲ್ಲೂ ಇವೆ!

ಮಲೇಷ್ಯಾ, ಸಿಂಗಪುರ ಹಾಗೂ ಕೆಲವು ಆಫ್ರಿಕಾ ಖಂಡದ ದೇಶಗಳು ಭಾರತ ಸ್ವಾತಂತ್ರ್ಯವಾದ ಬಳಿಕ ಕಣ್ಣು ಬಿಟ್ಟವು. ಆದರೆ ನಿತ್ಯದ ವ್ಯವಹಾರದಲ್ಲಿ ಅತಿ ಎನ್ನುವ ಮಟ್ಟದಲ್ಲಿನ ಶಿಸ್ತಿನ ಕಾರಣಕ್ಕೆ ಇವು ಹೊಸ ಕೌತುಕಗಳನ್ನು ಸೃಷ್ಟಿಸುತ್ತವೆ. ಅಶಿಸ್ತು, ಅಸಹಕಾರ, ಅಸಹನೆ ನಮ್ಮ ದೇಶದ ಕೌತುಕಗಳು! ಹಾಗಾಗಿಯೇ ನಾವು ಬೌದ್ಧಿಕವಾಗಿ, ಆರ್ಥಿಕವಾಗಿ ತಳಮುಟ್ಟುತ್ತಿದ್ದೇವೆ.

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಮನೋಜ್ಞ ಕಥೆ

ಎಸ್.ಗಿರಿಜರ 'ನನ್ನ ಪಪ್ಪ' ಕಥೆ ತಂದೆಯ ಉದಾರತೆಯನ್ನು ಮನೋಜ್ಞವಾಗಿ ಚಿತ್ರಿಸಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಕಥೆ ಎರಡು, ಗುರಿ ಒಂದು

ಕುಟೀಚಕ, ಬಹೂದಕ ಸನ್ಯಾಸಿ ವರ್ಗಗಳಲ್ಲಿ ಕುವೆಂಪು, ಕಾರಂತರನ್ನು ಸೇರಿಸಿದ್ದಾರೆ. ಆದರೆ ಇವರು ಸನ್ಯಾಸಿಗಳಲ್ಲ! ಆದರೆ ಈ ಪದಗಳ ಅರ್ಥ ತಿಳಿಸಿದ ವೈನತೇಯರಿಗೆ ಧನ್ಯವಾದಗಳು.

'ನನ್ನ ಪಪ್ಪ' ಹಾಗೂ 'ಪ್ರೀತಿಯಿಂದ ಕರೆದ ಹುಡುಗಿ' ಎರಡೂ ಕಥೆಗಳು ಒಂದೇ ಜಾಡಿನಲ್ಲಿವೆ. ಆದರೆ ಎರಡೂ ಕಥೆ ಹಿಡಿಸಿದವು.

-ರಾಜಶೇಖರ ಹಾದಿಮನಿ, ಧಾರವಾಡ/ ಬಳ್ಳಾರಿ ಮಧ್ವರಾಜ್, ಬೆಂಗಳೂರು

## ಅಲ್ಲಮ ಪ್ರತಿಭೆಯ ನಿರ್ಲಕ್ಷ್ಯ

ಜ. 3ರ 'ಸುಧಾ'ದಲ್ಲಿ ಪ್ರಕಟವಾದ 'ಸುದ್ದಿಯ ಶಿಖರದಲ್ಲಿ' ಲೇಖನದಲ್ಲಿ ಎಲ್. ಬಸವರಾಜು ಅವರ ಕುರಿತಂತೆ, 'ಈ ದೈತ್ಯ ಸಂಶೋಧಕನ ಕುರಿತು ಒಂದೂ ಅಭಿನಂದನ ಗ್ರಂಥ ಹೊರಬಂದಿಲ್ಲ' ಎಂದು ಗುಡಿಹಳ್ಳಿ ನಾಗರಾಜ ಬರೆದಿದ್ದಾರೆ. ಓದಿ ಸಖೇದಾಶ್ಚರ್ಯವಾಯಿತು. ಸಂಶೋಧನೆಗೆ ಹೊಸ ದಿಕ್ಕು ತೋರಿಸಿದ ಈ ಅಲ್ಲಮ ಪ್ರತಿಭೆಗೆ ಅಭಿನಂದನ ಗ್ರಂಥವನ್ನು ಸಲ್ಲಿಸಿ ಗೌರವಿಸದೇ ಇರುವುದು ಮರೆಯಬಾರದ ನೋವಿನ ಸಂಗತಿ.

-ಪಿ.ಎಸ್. ಕನಮಡಿ, ಮುದ್ದೇಬಿಹಾಳ

